ಸಹಕಾರಿ ಸಕ್ಕರೆ ಕಾರ್ಖಾನೆಗಳು

167 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನೋಂದಾಯಿಸಲ್ಪಟ್ಟಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳು ಎಷ್ಟು?

ಆ) ಎಷ್ಟು ಸಕ್ಕರೆ ಕಾರ್ಖಾನೆಗಳು ಕಾರ್ಯಾರಂಭ ಮಾಡಿವೆ.

ಇ) ಈ ಸಕ್ಕರೆ ಕಾರ್ಖಾನೆಗಳಲ್ಲಿ ಸರ್ಕಾರ ತೊಡಗಿಸಬೇಕಾದ ಹಣವೆಷ್ಟು?

ಈ) ಪ್ರಸಕ್ತ ಹಣಕಾಸು ವರ್ಷದಲ್ಲಿ ಈ ಉದ್ದೇಶಕ್ಕೆ ಒದಗಿಸಲಾಗಿರುವ ಮೊತ್ತವೆಷ್ಟು?

ಉ) ಎಷ್ಟು ವರ್ಷಗಳಲ್ಲಿ ಈ ಎಲ್ಲಾ ಸಕ್ಕರೆ ಕಾರ್ಖಾನೆಗಳು ಕಾರ್ಯಾರಂಭ ಮಾಡಲಿವೆ?

ಶ್ರೀ ಉಮೇಶ್ ವಿ. ಕತ್ತಿ (ಸಕ್ಕರೆ ಸಚಿವರು) :

ಅ) 37.

ಆ) 20.

ಇ) ಅಂದಾಜು ರೂ. 144.16 ಕೋಟಿ.

ಈ) ರೂ. 2.40 ಕೋಟಿ.

ಉ) ಒಂದು ಹೊಸ ಸಹಕಾರಿ ಸಕ್ಕರೆ ಕಾರ್ಖಾನೆಯು 1998-99ನೇ ಸಾಲಿನ ಹಂಗಾಮಿನಲ್ಲಿ ಕಾರ್ಯಾರಂಭ ಮಾಡುವ ಅಂದಾಜಿರುತ್ತದೆ. ಉಳಿದ ಕಾರ್ಖಾನೆಗಳಿಗೆ ಅವಧಿ ಸಾಲದ ಜೋಡಣೆಯಾಗಬೇಕಿರುವ ಕಾರಣ ಹಾಗೂ ಯೋಜನಾ ಕಾರ್ಯಗತವು ಅವಧಿ ಸಾಲದ ಮಂಜೂರಾತಿಯನ್ನು ಅವಲಂಬಿಸಿರುವುದರಿಂದ ಉಳಿದ ಕಾರ್ಖಾನೆಗಳು ಇನ್ನೆಷ್ಟು ವರ್ಷಗಳಲ್ಲಿ ಕಾರ್ಯಾರಂಭ ಮಾಡುವುವು ಎಂಬುದನ್ನು ಖಚಿತವಾಗಿ ಹೇಳಲು ಬರುವುದಿಲ್ಲ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಲೈಸನ್ಸ್ ಪಡೆದು ಹಣಕಾಸನ್ನು ಹೊಂದಾಣಿಕೆ ಮಾಡಿಕೊಳ್ಳಬೇಕಾದಂತಹ ಸಹಕಾರಿ ಸಕ್ಕರೆ ಕಾರ್ಖಾನೆಗಳು ಎಷ್ಟು? ಈ ಪ್ರತಿ ಸಂಸ್ಥೆಗೂ ಸರ್ಕಾರ ಕೊಡಬೇಕಾದಂತಹ ಶೇರು ಹಣವೆಷ್ಟು? ಅವರು ಎಷ್ಟು ಕೂಡಿಸಿದ್ದಾರೆ.

ಶ್ರೀ ಉಮೇಶ್ ವಿ. ಕತ್ತಿ : ಮಾನ್ಯ ಉಪಾಧ್ಯಕ್ಷರೆ, ಒಟ್ಟು 11 ಸಹಕಾರಿ ಸಕ್ಕರೆ ಕಾರ್ಖಾನೆಗಳು ಲೈಸನ್ಸ್ ಪಡೆದಿವೆ. ರೈತರು ಕೂಡಿಸಬೇಕಾದಂತಹ ಶೇರು ಹಣ ಐದು ಕೋಟಿ ಐವತ್ತು ಲಕ್ಷ ರೂಪಾಯಿಗಳು, ಒಂದು ಹೊಸ ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕೆಂದರೆ 55 ಕೋಟಿ ರೂಪಾಯಿಗಳು ಬೇಕು. ರೈತರು ಅದರ ಶೇ. 10ರಷ್ಟು ಹಣವನ್ನು ಕೂಡಿಸಬೇಕಾಗುತ್ತದೆ. ಸರ್ಕಾರ ಶೇ. 30ರಷ್ಟು ಕೊಡಬೇಕಾಗುತ್ತದೆ. ಆ ಪ್ರಕಾರ ಹದಿನಾಲ್ಕು ಕೋಟಿ ನಲವತ್ತು ಲಕ್ಷ ರೂಪಾಯಿಗಳಷ್ಟು ಹಣವನ್ನು ಪ್ರತಿಸಕ್ಕರೆ ಕಾರ್ಖಾನೆಗೆ ಕೊಡಬೇಕಾಗುತ್ತದೆ. ಎಲ್ಲಾ ಸೇರಿ 158 ಕೋಟಿ ರೂಪಾಯಿಗಳಷ್ಟು

ಹಣವನ್ನು ಸಕ್ಕರೆ ಕಾರ್ಖಾನೆಗೆ ಕೊಡಬೇಕಾಗುತ್ತದೆ. ಆದರೆ ರೈತರು ಕೂಡಿಸಬೇಕಾದಂತಹ ಶೇರು ಹಣವನ್ನು ಯಾವ 11 ಸಕ್ಕರೆ ಕಾರ್ಖಾನೆಗಳೂ ಕೂಡಿಸಿಲ್ಲ. ಹಾಗಾಗಿ ಸರ್ಕಾರವು ಹಣವನ್ನು ಬಿಡುಗಡೆ ಮಾಡಿಲ್ಲ. 1991-92ರಿಂದ ಇಲ್ಲಿಯವರೆಗೆ ಎನ್.ಸಿ.ಡಿ.ಸಿ, ಐ.ಎಫ್. ಸಿ.ಐ, ಐ.ಸಿ.ಐ.ಸಿ.ಐ, ಆಗಲಿ ಯಾವ ಹಣಕಾಸು ಸಂಸ್ಥೆಗಳು ಸಾಲ ಒದಗಿಸಲು ಹಿಂದೇಟು ಹಾಕಿದ ಕಾರಣ ಸಕ್ಕರೆ ಕಾರ್ಖಾನೆಗಳು ಪ್ರಾರಂಭ ಮಾಡುವುದಕ್ಕೆ ಆಗಲಿಲ್ಲ. ಆದರೂ ಸರ್ಕಾರ ಪ್ರಯತ್ನ ಮಾಡಿ ಖಾನಪುರದ ಸಕ್ಕರೆ ಕಾರ್ಖಾನೆ, ಮುಧೋಳದ ಸಕ್ಕರೆ ಕಾರ್ಖಾನೆಗೆ ವಾಣಿಜ್ಯ ಬ್ಯಾಂಕ್ ಮುಖಾಂತರ ಸಾಲವನ್ನು ಒದಗಿಸಿ ಈಗಾಗಲೇ ಈ ಕಾರ್ಖಾನೆಗಳನ್ನು ಪ್ರಾರಂಭ ಮಾಡಿದ್ದೇವೆ. ಇನ್ನು ಉಳಿದಂತಹ ಹನ್ನೊಂದು ಸಕ್ಕರೆ ಕಾರ್ಖಾನೆಗಳಿಗೆ ರೈತರು ತಮ್ಮ ಶೇರು ಹಣವನ್ನು ಕೂಡಿಸಿದರೆ ಸರ್ಕಾರ ಕೊಡಬೇಕಾದಂತಹ ಹಣವನ್ನು ಕೊಡುವುದಕ್ಕೆ ಸಿದ್ದವಿದೆ ಎಂದು ನಾನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳುವುದಕ್ಕಿಚ್ಚಿಸುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಒಂದು ಸಹಕಾರಿ ಸಕ್ಕರೆ ಕಾರ್ಖಾನೆಗೆ ಸರ್ಕಾರ 15 ಕೋಟಿ ರೂಪಾಯಿಗಳನ್ನು ಕೊಡಬೇಕಾಗುತ್ತದೆಂದು ಹೇಳುತ್ತಾರೆ. ಆದರೆ ಬಜೆಟ್‌ನಲ್ಲಿ ಹಣ ಇರುವಂಥಾದ್ದು ಎರಡು ಕೋಟಿ ನಲವತ್ತು ಲಕ್ಷ ರೂಪಾಯಿಗಳು ಆಗಿದೆ. ನೀವು ಒಂದು ಕಾರ್ಖಾನೆಗೆ ಹದಿನೈದು ಕೋಟಿ ರೂಪಾಯಿಗಳನ್ನು ಕೊಡಬೇಕೆಂದರೆ ಇವರು ಎಷ್ಟು ವರ್ಷಕ್ಕೆ ಅದನ್ನು ಕೊಡುತ್ತಾರೆ. ಈ ರೀತಿ ಆದರೆ ಹನ್ನೊಂದು ಸಕ್ಕರೆ ಕಾರ್ಖಾನೆಗಳು ಇವೆ. ಈಗ ಮಾನ್ಯ ಮಂತ್ರಿಗಳೆ ಸಹಕಾರಿ ಸಕ್ಕರೆ ಕಾರ್ಖಾನೆಯಿಂದ ಸರ್ಕಾರಕ್ಕೆ ಲಾಭವಿದೆ. ಆದರೆ ರೈತರಿಗೆ ಮತ್ತು ಅದನ್ನು ಕಟ್ಟುವಂಥವರಿಗೆ ಲಾಭವಿದೆಯೋ, ಇಲ್ಲವೊ, ಆದರೆ ಸರ್ಕಾರಕ್ಕೆ ಲಾಭವಿದೆ. ಈ ಪರಿಸ್ಥಿತಿ ಇರುವಾಗ ನೀವು ಸಾಲವನ್ನಾದರೂ ತಂದು ಶೇರು ಹಣವನ್ನು ಸಂಗ್ರಹ ಮಾಡುವಂತಹ ವ್ಯವಸ್ಥೆಯನ್ನು ಮಾಡುತ್ತೀರಾ ಎಂದು ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಉಮೇಶ್ ವಿ. ಕತ್ತಿ : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಇದರ ಬಗ್ಗೆ ರೈತರು ತಮ್ಮ ಶೇರು ಹಣವನ್ನು ಕೂಡಿಸದೆ ಇರುವುದರಿಂದಲೇ ಸರ್ಕಾರ ಹಿಂದಿನ ವರ್ಷ ಬಜೆಟ್‌ನಲ್ಲಿಟ್ಟಂತಹ ಹಣವನ್ನು ಕೊಡುವುದಕ್ಕಾಗಲಿಲ್ಲ. ಈ ವರ್ಷ ಈ ಕಾರಣದಿಂದಲೇ ಬಜೆಟ್‌ನಲ್ಲಿ ಹಣವನ್ನು ಕಡಿಮೆ ಮಾಡಿದ್ದೇವೆ. ಯಾವುದೇ ಸಕ್ಕರೆ ಕಾರ್ಖಾನೆ ರೈತರಿಂದ ಕೂಡಿಸಬೇಕಾದಂತಹ ಹಣವನ್ನು ಸಾಲವನ್ನಾಗಿ ಪಡೆಯಲು ಸಿದ್ಧವಾದರೆ ನಮ್ಮ ಸರ್ಕಾರ ಕೊಡಬೇಕಾದಂತಹ 14 ಕೋಟಿ 40 ಲಕ್ಷ ರೂಪಾಯಿಗಳನ್ನು ಕೂಡಲೇ ಕೊಡುವುದರ ಬಗ್ಗೆ ಮತ್ತು ಸರ್ಕಾರದಿಂದ ಕೊಡಬೇಕಾದಂತಹ ಗ್ಯಾರಂಟಿಯಾಗಲೀ, ಇನ್ನಿತರ ಸವಲತ್ತುಗಳನ್ನು ಕೊಡುವಂತಹ ಕೆಲಸವನ್ನು ಸರ್ಕಾರ ಮಾಡುತ್ತದೆ. ಇದು ಅಲ್ಲದೆ ಈ ಸಂಸ್ಥೆ ಹಣಕಾಸಿನ ಸಾಲವನ್ನು ಪಡೆಯಲು ಸಾಕಷ್ಟು ಸಾಲವನ್ನು ಅದು ನಬಾರ್ಡ್‌ದಿಂದಾಗಲಿ, ಎನ್ ಸಿ ಡಿ ಸಿ, ಐ ಎಫ್ ಸಿ, ಐಸಿಐಸಿಐ ಗಳೊಂದಿಗೆ ಈ ವಿಚಾರವಾಗಿ ಸಾಕಷ್ಟು ಬಾರಿ ಸಭೆ ಮಾಡಿದ್ದೇವೆ. ಸರ್ಕಾರದವರು ಕೊಡಬೇಕಾದಂತಹ ಶೇ. ೩೦ರಷ್ಟು ಹಣವನ್ನು ಕೊಡಲು ಎನ್.ಸಿ.ಡಿ.ಸಿಯವರು ಬರುವ ಎರಡು ತಿಂಗಳಲ್ಲಿ ಕೊಡಲು ಒಪ್ಪುವರೆಂದು ನಮ್ಮ ಮನಸ್ಸಿನಲ್ಲಿದೆ. ಆದ ಕಾರಣ ನಾವು ಈ ಸಕ್ಕರೆ ಕಾರ್ಖಾನೆಗೆ ಶೇರು ಹಣವನ್ನು ಕೊಡಲು ಸದಾ ಸಿದ್ದರಿದ್ದೇವೆಂದು ತಿಳಿಸುತ್ತೇವೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ನೀವು ಶೇರು ಹಣವನ್ನು ಕೂಡಿಸುವುದಕ್ಕೆ ನಬಾರ್ಡ್‌ನಿಂದ ರಿ-ಫೈನಾನ್ಸ್ ಅಸಿಸ್ಟೆಂಟ್ಸ್ ಅನ್ನು ತೆಗೆದುಕೊಂಡು ಡಿ.ಸಿ.ಸಿ. ಬ್ಯಾಂಕ್ ಮುಖಾಂತರ ಮಾಡುವುದಕ್ಕೆ ಆಗುವುದಿಲ್ಲವೇನು? ನೀವು ಈ ರೀತಿ ತೆಗೆದುಕೊಂಡರೆ ಸದಸ್ಯರು ಶೇರು ಹಣವನ್ನು ಕೂಡಿಸುವುದಕ್ಕೆ ತೊಂದರೆಯಾಗುವುದಿಲ್ಲ. ಈ ರೀತಿ ಕೂಡಿಸುವುದಕ್ಕೆ ಏನು ತೊಂದರೆ ಇದೆ, ಕಾರಣವೇನು? ಈ ತೊಂದರೆಯನ್ನು ನಿಭಾಯಿಸುವುದಕ್ಕೆ ಸರ್ಕಾರ ಏನು ಮಾಡುತ್ತಿದೆ. ಈಗ ನೀವು 11 ಸಕ್ಕರೆ ಕಾರ್ಖಾನೆಗೆ ರಿಜಿಸ್ಟ್ರೇಷನ್ ಮಾಡಿದ್ದೀರಿ, ಲೈಸನ್ಸ್ ಕೊಟ್ಟಿದ್ದೀರಿ. ಅವರು ಪೂರ್ತಿ ಕೆಲಸವನ್ನು ಮಾಡುವಂಥಾದ್ದಕ್ಕೆ ಸರ್ಕಾರವೂ ಜವಾಬ್ದಾರಿಯಾಗಿರುತ್ತದೆ. ಆದುದರಿಂದ ಏನು ಅಡೆತಡೆಗಳು ಬರುತ್ತದೆಯೋ ಅದನ್ನು ನಿವಾರಣೆ ಮಾಡಿ ಬೇಗ ಕಾರ್ಯಾರಂಭ ಮಾಡುವುದಕ್ಕೆ ಸರ್ಕಾರ ಏನಾದರೂ ಮಾಡಬೇಕಲ್ಲಾ, ಅದಕ್ಕೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಉಮೇಶ್ ವಿ. ಕತ್ತಿ : ಮಾನ್ಯ ಉಪಾಧ್ಯಕ್ಷರೆ, ನಾನು ಈಗಾಗಲೇ ಹೇಳಿದ ಹಾಗೆ ರೈತರು ಹಣವನ್ನು ಕೂಡಿಸಬೇಕಾಗುತ್ತದೆ. ಅದಕ್ಕೆ ಅಲ್ಲಿಯ ಪ್ರವರ್ತಕರು, ಆ ಸಂಸ್ಥೆಯವರು ಸರ್ಕಾರದವರ ಸಹಾಯ, ಸಹಕಾರ ಬೇಕೆಂದರೆ ಆ ಭಾಗದ ರೈತರಾಗಲಿ, ಪ್ರವರ್ತಕರಾಗಲಿ, ಮುಂದೆ ಬರುವುದಾದರೆ ನಾವು ನಬಾರ್ಡ್‌ನಿಂದಾಗಲೀ ಡಿ.ಸಿ.ಸಿ. ಬ್ಯಾಂಕ್‌ನಿಂದಾಗಲೀ ಹಣವನ್ನು ಒದಗಿಸುವಂತಹ ಪ್ರಯತ್ನವನ್ನು ಮಾಡಬಹುದೆನ್ನುವಂತಹ ಮಾತನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಈ ವಿಷಯವಾಗಿ ಮಾನ್ಯ ಸಹಕಾರ ಸಚಿವರು ಉತ್ತರ ನೀಡಿದರೆ ಸರಿಯಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಈ ವಿಷಯವಾಗಿ ಈಗಾಗಲೇ ಮಾನ್ಯ ಸಕ್ಕರೆ ಸಚಿವರು ಹೇಳಿದ್ದಾರೆ. ರೈತರು ಎಲ್ಲೆಲ್ಲಿ ಮುಂದೆ ಬರುತ್ತಾರೆ, ಅವರಿಗೆ ನಬಾರ್ಡ್‌ನಿಂದ ಲೋನ್ ತೆಗೆದುಕೊಂಡು ಡಿ.ಸಿ.ಸಿ.ಬ್ಯಾಂಕ್ ಮುಖಾಂತರ ರೈತರು ಶೇರು ಖರೀದಿ ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಈಗ ಬೆಳಗಾಂ, ಬಿಜಾಪುರ, ಧಾರವಾಡದ ಡಿ.ಸಿ.ಸಿ. ಬ್ಯಾಂಕ್‌ಗಳಲ್ಲಿ ಈ ವ್ಯವಸ್ಥೆ ಮಾಡಿದ್ದೇವೆ. ಅದಕ್ಕೆ ಸಂಸ್ಥೆಯ ಪ್ರವರ್ತಕರು ಕೆಲಸವನ್ನು ಮಾಡಬೇಕಾಗುತ್ತದೆ. ಅವರು ಜನರ ವಿಶ್ವಾಸವನ್ನು ತೆಗೆದುಕೊಂಡು ಬಂದರೆ ನಿಶ್ಚಿತವಾಗಿ ಡಿ.ಸಿ.ಸಿ. ಬ್ಯಾಂಕ್ ಮತ್ತು ಅಫೆಕ್ಸ್ ಬ್ಯಾಂಕ್ ಮುಖಾಂತರ ಸಾಲ ಕೊಡುವಂತಹ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಉಮೇಶ್ ವಿ. ಕತ್ತಿ : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಬೆಳಗಾಂನಲ್ಲಿ ಭಾಗ್ಯಲಕ್ಷ್ಮಿ ಸಕ್ಕರೆ ಕಾರ್ಖಾನೆ, ಧನಲಕ್ಷ್ಮಿ ಸಕ್ಕರೆ ಕಾರ್ಖಾನೆಯ ಪ್ರವರ್ತಕರು ರೈತರು ಮುಂದೆ ಬಂದರು. ಅವರಿಗೆ ಡಿ.ಸಿ.ಸಿ. ಬ್ಯಾಂಕ್ ಮುಖಾಂತರ ಶೇರು ಹಣವನ್ನು ಎಷ್ಟು ಸಾಧ್ಯವೋ ಅಷ್ಟು ಹಣವನ್ನು ಒದಗಿಸುವಂತಹ ಪ್ರಯತ್ನವನ್ನು ಮಾಡಿದ್ದೇವೆ. ಬಿಜಾಪುರ ಜಿಲ್ಲೆಯಲ್ಲಿ ಭೀಮ ಶಂಕರ್ ಸಕ್ಕರೆ ಕಾರ್ಖಾನೆಯವರು ಪ್ರವರ್ತಕರು, ರೈತರು ಮುಂದೆ ಬಂದರು. ಅವರಿಗೆ ಶೇರು ಹಣವನ್ನು ಒದಗಿಸುವಂತಹ ಪ್ರಯತ್ನವನ್ನು ಮಾಡಿದ್ದೇವೆ. ಇನ್ನು ಉಳಿದಂತಹ ಯಾವುದೇ ಸಕ್ಕರೆ ಕಾರ್ಖಾನೆಯ ಪ್ರವರ್ತಕರು, ರೈತರು ಈ

ಯೋಜನೆಯಲ್ಲಿ ಮುಂದೆ ಬಂದರೆ ಅವರಿಗೆ ಸಹಕಾರ ನೀಡುತ್ತೇವೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಕ್ಕರೆ ಸಚಿವರು ಮತ್ತು ಸಹಕಾರ ಸಚಿವರು ಕೂಡಿ ಈ ಕೆಲಸವನ್ನು ಮಾಡಬೇಕಾಗುತ್ತದೆ. ಇದನ್ನು ಸಕ್ಕರೆ ಕಾರ್ಖಾನೆಯ ಪ್ರವರ್ತಕರಿಗೆ ಬಿಟ್ಟರೆ ಈ ಕೆಲಸವಾಗುತ್ತದೆನ್ನುವ ಮಾತನ್ನು ನಾನು ಒಪ್ಪುವುದಿಲ್ಲ. ಇದಕ್ಕೆ ಸರ್ಕಾರದ ಸಂಪೂರ್ಣವಾದ ಬೆಂಬಲ ಬೇಕು, ಮತ್ತೆ ಡಿ.ಸಿ.ಸಿ. ಬ್ಯಾಂಕ್‌ನ ಸಹಕಾರವೂ ಪೂರ್ತಿ ಬೇಕಾಗುತ್ತದೆ. ಹೀಗೆ ಆದರೆ ಮಾತ್ರ ಶೇರು ಹಣವನ್ನು ಕೂಡಿಸುವುದಕ್ಕೆ ಸಾಧ್ಯವಾಗುತ್ತದೆ. ಈ ಸಕ್ಕರೆ ಕಾರ್ಖಾನೆಗಳು ಶೇರು ಹಣವನ್ನು ಕೂಡಿಸುವುದಕ್ಕೆ ತೊಂದರೆ ಎಂದು ನಾನು ಅಂದುಕೊಂಡಿಲ್ಲ. ಆದುದರಿಂದ ದಯಮಾಡಿ ಈ ಹನ್ನೊಂದು ಸಕ್ಕರೆ ಕಾರ್ಖಾನೆಗಳು ಆದಷ್ಟು ಬೇಗ ತಮ್ಮ ಪಾಲಿನ ಶೇರು ಹಣವನ್ನು ಕೂಡಿಸುವಂತಹ ವ್ಯವಸ್ಥೆಯನ್ನು ಮಾಡಬೇಕು. ಮತ್ತೆ ಎನ್.ಸಿ.ಡಿ.ಸಿ. ಸಂಸ್ಥೆಯವರು ಕೊಡುವಂತಹ ಹಣವನ್ನು ಕಾರ್ಖಾನೆಯವರು ಸಂಗ್ರಹ ಮಾಡಿ ಕೊಡುವಂಥಾದ್ದಕ್ಕೆ ಒಪ್ಪಬೇಕಾಗುತ್ತದೆ ಎಂದು ಹೇಳಿದ್ದಿರಲ್ಲಾ ಅದು ಬಹಳ ಸಂತೋಷದ ಸಂಗತಿಯಾಗಿದೆ. ರೈತರು ತಾವು ಬೇಗ ತಮ್ಮ ಪಾಲಿನ ಶೇರು ಹಣವನ್ನು ಕೊಡುವ ಹಾಗೆ ತಮ್ಮ ಇತಿಮಿತಿಯೊಳಗೆ ಬಲವನ್ನು ಉಪಯೋಗಿಸಬೇಕೆಂದು ನಾನು ಕೇಳುತ್ತೇನೆ.

ಶ್ರೀ ಕೆ. ವಿರೂಪಾಕ್ಷಪ್ಪ (ಸಿಂಧನೂರು) : ಮಾನ್ಯ ಉಪಾಧ್ಯಕ್ಷರೆ, ಗಂಗಾವತಿಯಲ್ಲಿ ಒಂದು ಸಕ್ಕರೆ ಕಾರ್ಖಾನೆ ಇದೆ. ಈಗ ಅದನ್ನು ಮುಚ್ಚುವಂತಹ ಹಂತದಲ್ಲಿದೆ. ಇದು ಏಷ್ಯಾದಲ್ಲೇ ಅತಿ ದೊಡ್ಡ ಎರಡನೆಯ ಕಾರ್ಖಾನೆಯೆಂದು ನನಗೆ ತಿಳಿದು ಬಂದಿರುವಂತಹ ವಿಚಾರವಾಗಿದೆ. ಆದರೆ ಇವತ್ತು ಸರ್ಕಾರ ಅದನ್ನು ಖಾಸಗಿಯವರಿಗೆ ಮಾರಾಟ ಮಾಡುತ್ತಾರೆಂಬ ವಿಚಾರ ತಿಳಿದು ಬಂದಿದೆ. ಇದರಿಂದ ಇದನ್ನೇ ಅವಲಂಬಿಸಿರುವಂಥ ಸಾವಿರಾರು ಜನ ರೈತರಿಗೆ ಬಹಳಷ್ಟು ಹಾನಿಯಾಗುತ್ತದೆ. ಇದು ನಮ್ಮ ಭಾಗದ ಒಂದು ದೊಡ್ಡ ಕಾರ್ಖಾನೆಯೂ ಕೂಡ ಆಗಿದೆ. ಇದು ಖಾಸಗೀಯವರ ಕೈವಶವಾಗುತ್ತಿದೆ, ಆದುದರಿಂದ ಇದರ ಬಗ್ಗೆ ಸರ್ಕಾರ ಏನು ನಿಲುವನ್ನು ತೆಗೆದುಕೊಂಡಿದೆ ಎನ್ನುವಂತಹ ಉತ್ತರವನ್ನು ಕೊಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಯವರನ್ನು ಕೇಳಲಿಚ್ಛಿಸುತ್ತೇನೆ.

ಶ್ರೀ ಮಂಜುನಾಥ ಸಿ. ಕುನ್ನೂರ್ : ಸನ್ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಸಕ್ಕರೆ ಸಚಿವರು 11 ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ರಾಜ್ಯದಲ್ಲಿ ತೆಗೆದಿರುವುದಾಗಿ ಹೇಳಿದ್ದಾರೆ. ಆದರೆ ಕೆಲವೊಂದು ಸಕ್ಕರೆ ಕಾರ್ಖಾನೆಗಳು ಪರವಾನಿಗೆಯನ್ನು ಪಡೆದುಕೊಂಡು ಒಂದು ರೂಪಾಯಿಯನ್ನು ಕೂಡ ಸಂಗ್ರಹಿಸದಂಥ ಪರಿಸ್ಥಿತಿಯನ್ನು ನಾವು ಈಗಾಗಲೇ ನೋಡುತ್ತಿದ್ದೇವೆ. ಕಾರಣ, ಇವತ್ತು ಶಿಗ್ಗಾಂವ್‌ನಲ್ಲಿ ಸಕ್ಕರೆ ಕಾರ್ಖಾನೆಯನ್ನು ತೆಗೆಯಬೇಕೆಂದು ರಾಜ್ಯಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಯಾರು ಮಾಡಬೇಕೆಂದಿದ್ದಾರೆ ಅವರಿಗೆ ಇವತ್ತು ಪರವಾನಿಗೆ ಸಿಕ್ಕಿಲ್ಲ. ಯಾರು ಮಾಡದೆ ಇದ್ದಾರೆ ಅಂಥವರಿಗೆ ಪರವಾನಿಗೆ ಸಿಕ್ಕಿದ್ದಾವೆ. ಅದರ ಸಲುವಾಗಿ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದಲ್ಲಿ ಪ್ರಯತ್ನ ಮಾಡಿ ನಮ್ಮ ಶಿಗ್ಗಾಂವ್‌ಗೂ ಕೂಡ ಒಂದು ಸಕ್ಕರೆ ಕಾರ್ಖಾನೆಯನ್ನು ಮಾಡುವುದಕ್ಕೆ ಅನುಮತಿಯನ್ನು ದೊರಕಿಸಿಕೊಡಬೇಕೆಂದು ತಮ್ಮ ಮುಖೇನ ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ.

ಶ್ರೀ ಉಮೇಶ್ ವಿ. ಕತ್ತಿ : ಮಾನ್ಯ ಉಪಾಧ್ಯಕ್ಷರೆ, ಶಿಗ್ಗಾಂವ್ ಸಕ್ಕರೆ ಕಾರ್ಖಾನೆಗೆ ಪರವಾನಿಗೆ ಕೊಟ್ಟಿದ್ದೆವು. ಆದರೆ ಅವರು ಶೇರು ಹಣವನ್ನು ಕೂಡಿಸಲಿಲ್ಲ, ಈಗಾಗಲೇ ಲಿಕ್ವಿಡೇಷನ್ ಆಗಿ ಕ್ಲೋಸ್ ಕೂಡ ಆಗಿದೆ. ಹೊಸ ಸಕ್ಕರೆ ಕಾರ್ಖಾನೆಗೆ ತಾವು ಹೊಸ ಪ್ರಸ್ತಾವನೆಯನ್ನು ಕೊಡುವುದಾದರೆ ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸುವ ವ್ಯವಸ್ಥೆಯನ್ನು ಮಾಡುತ್ತೇವೆ. ಎರಡನೆಯದಾಗಿ, ಗಂಗಾವತಿ ಸಕ್ಕರೆ ಕಾರ್ಖಾನೆಯ ಬಗ್ಗೆ ಮಾನ್ಯ ಸದಸ್ಯರು ಕೇಳಿದಂತೆ, ಅದರ ಬಗ್ಗೆ ತಕ್ಷಣ ನನ್ನಲ್ಲಿ ಮಾಹಿತಿ ಇಲ್ಲ, ತಾವು ಪ್ರತ್ಯೇಕ ಪ್ರಶ್ನೆಯನ್ನು ಕೇಳಿದಾಗ ಸವಿಸ್ತಾರವಾದ ಮಾಹಿತಿಯನ್ನು ಒದಗಿಸುತ್ತೇನೆ. ಇನ್ನು ಡಿ.ಆರ್. ಪಾಟೀಲ್‌ರವರು ಹೇಳಿದ ಹಾಗೆ, ಈ ಸಭೆಗೆ ಅವರನ್ನು ಕರೆಯುತ್ತೇನೆ, ಯಾವ ರೀತಿ ಮಾಡುವುದೆನ್ನುವ ಬಗ್ಗೆ ಸಹಕಾರ ಸಚಿವರು ಸೇರಿದಂತೆ ನಮ್ಮ ಭಾಗದ ಎಲ್ಲಾ ಶಾಸಕರನ್ನು ಕರೆದು ಈ ಸಕ್ಕರೆ ಕಾರ್ಖಾನೆಗಳು ಪ್ರಾರಂಭವಾಗುವ ಹಾಗೆ ನಾವೆಲ್ಲಾ ಕೂಡಿ ಪ್ರಯತ್ನ ಮಾಡುತ್ತೇವೆಂದು ತಮ್ಮ ಮೂಲಕ ಅವರಿಗೆ ತಿಳಿಸಬಯಸುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಸಭಾಧ್ಯಕ್ಷರೆ, ರಾಜ್ಯದಲ್ಲಿ ನೋಂದಾಯಿಸಲ್ಪಟ್ಟಿರುವ ಸಹಕಾರ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು ಎಂದು ಕೇಳಿದರೆ 37 ಎನ್ನುತ್ತೀರಿ. ಅದರಲ್ಲಿ ಸಹಕಾರಿ ಕ್ಷೇತ್ರದಲ್ಲಿ ಕಾರ್ಯಾರಂಭ ಮಾಡುತ್ತಿರುವವರು 20 ಎಂದು ಹೇಳುತ್ತೀರಿ. ಕರ್ನಾಟಕದಲ್ಲಿ ಇದುವರೆವಿಗೆ ಇದ್ದದ್ದು 30 ಸಕ್ಕರೆ ಕಾರ್ಖಾನೆಗಳು, 17 ಸಹಕಾರಿ, 4 ಜಂಟಿ ಕ್ಷೇತ್ರ, 2 ಸರ್ಕಾರಿ ಕ್ಷೇತ್ರ, 9 ಖಾಸಗಿ ಕ್ಷೇತ್ರ. ಹೀಗಾಗಿ 37 ಸಕ್ಕರೆ ಕಾರ್ಖಾನೆಗಳು ಯಾವುದಿದೆ, ಎಲ್ಲವು ಸೇರಿ 37 ಅಥವಾ ಸಹಕಾರಿ ಕ್ಷೇತ್ರದ್ದೇ 37? ನೀವು ಕೊಟ್ಟಿರುವ ಮಾಹಿತಿ ತಪ್ಪಿದೆ.

ಶ್ರೀ ಉಮೇಶ್ ವಿ. ಕತ್ತಿ : ಈ ರಾಜ್ಯದಲ್ಲಿ ಕೆಲಸ ಮಾಡುತ್ತಿರುವ ಕಾರ್ಖಾನೆಗಳು, 17, ಲಿಕ್ವಿಡೇಷನ್ ರೂಪದಲ್ಲಿರುವವು6, ಸೊಸೈಟಿ ರಿಜಿಸ್ಟ್ರೇಷನ್ ಆಗಿ ಲೈಸೆನ್ಸ್ ಪಡೆಯದಿರುವವು3, ಇನ್ನು ಸ್ಥಾಪನೆಯಾಗಬೇಕಾಗಿರುವುದು 11 ಸಹಕಾರಿ ಸಕ್ಕರೆ ಕಾರ್ಖಾನೆಗಳು, ಈ ರೀತಿ ಬ್ರೇಕ್ ಅಪ್ ಇದೆ ಒಟ್ಟು 37 ಸಕ್ಕರೆ ಕಾರ್ಖಾನೆಗಳಾಗುತ್ತದೆ, ಈ ರೀತಿಯಾಗಿ ನಾನು ಉತ್ತರ ಕೊಟ್ಟಿದ್ದೇವೆ, ತಪ್ಪು ಮಾಹಿತಿಯನ್ನು ಒದಗಿಸಿಲ್ಲವೆಂದು ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಹೆಚ್. ಶಿವಪ್ಪ : ಅಧ್ಯಕ್ಷರೆ, ಈಗ ನಮ್ಮ ಮಾನ್ಯ ಮಿತ್ರರಾದ ಕುನ್ನೂರವರು ಕೇಳಿದಂತೆ ರಿಜಿಸ್ಟ್ರೇಷನ್ ಮಾಡುತ್ತಾರೆ, ಲೆಟರ್ ಆಫ್ ಇಂಡೆಂಟ್ ಬರುತ್ತದೆ, ಅದಕ್ಕೆ ಜೀವ ಎಷ್ಟು ವರ್ಷವಿರುತ್ತದೆ? ಈ ವರ್ಷ ತೆಗೆದುಕೊಂಡು ಇನ್ನು ಹತ್ತು ಹದಿನೈದು ವರ್ಷಗಳವರೆಗೆ ಷೇರು ಸಂಗ್ರಹಣೆ ಆಗದಿದ್ದರೆ ಅದರ ಗತಿಯೇನು? ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ? ಇನ್ನೊಬ್ಬರು ಕೆಲಸ ಮಾಡುವುದಕ್ಕಾಗುವುದಿಲ್ಲ, ಇವರು ಕೆಲಸ ಮಾಡುವುದಿಲ್ಲ, ಆದುದರಿಂದ ಸರ್ಕಾರದ ನಿಲುವೇನು? ಇಷ್ಟು ದಿವಸದೊಳಗೆ ನೀವು ಷೇರು ವಂತಿಗೆಯನ್ನು ಸಂಗ್ರಹ ಮಾಡದಿದ್ದರೆ ರದ್ದುಪಡಿಸುತ್ತೇವೆ ಎನ್ನುವ ಒಂದು ನಿಯಮವೇನಾದರೂ ಇದೆಯೇ? ಇಲ್ಲದಿದ್ದರೆ, ಆ ನಿಯಮವನ್ನು ನೀವು ನಿಬಂಧನೆ ಮಾಡುತ್ತೀರೋ?

ಶ್ರೀ ಉಮೇಶ್ ವಿ. ಕತ್ತಿ. : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ನಾನು ಹೇಳಿದಂತೆ, 6 ಸಕ್ಕರೆ ಕಾರ್ಖಾನೆಗಳು ಸೊಸೈಟಿ ರಿಜಿಸ್ಟ್ರೇಷನ್ ಮಾಡಿ ಪರವಾನಿಗೆಯನ್ನು ಪಡೆದು ಇಲ್ಲಿಯವರೆಗೆ ಷೇರ್ ಸಂಗ್ರಹಣೆ ಮಾಡದೆ 1986 ರಲ್ಲಿ ರಿಜಿಸ್ಟ್ರೇಷನ್ ಆಗಿ ಅಕ್ವಿಡೇಷನ್ ಆಗಿ ಕ್ಲೋಸ್ ಆಗಿವೆ. ಎರಡನೆಯದಾಗಿ ಮೂರು ಸಕ್ಕರೆ ಕಾರ್ಖಾನೆಗಳ ಸೊಸೈಟಿ ರಿಜಿಸ್ಟ್ರೇಷನ್ ಆಯಿತು, ಆದರೆ ಪರವಾನಿಗೆ ಪಡೆಯಲಿಲ್ಲ. ಹಾಗಾಗಿ 1986 ರಲ್ಲಿದ್ದಂಥ ಸಕ್ಕರೆ ಕಾರ್ಖಾನೆಗಳು ಅವೂ ಕೂಡ ಲಿಕ್ವಿಡೇಷನ್ ಆದವು. ಈ ರೀತಿ ಒಂಬತ್ತು ಸಕ್ಕರೆ ಕಾರ್ಖಾನೆಗಳು ಪರವಾನಿಗೆಯನ್ನು ಪಡೆಯದೆ ಇದ್ದ ಕಾರಣ, ಷೇರು ಸಂಗ್ರಹಣೆ ಮಾಡದಿದ್ದ ಕಾರಣ ಲಿಕ್ವಿಡೇಷನ್ ಮುಖಾಂತರ ಸಮಾಪನ ಮಾಡಲಾಗಿದೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲು ಇಚ್ಛಿಪಡುತ್ತೇನೆ.

ಮೈಸೂರಿನ ನರಸಿಂಹರಾಜ ಕ್ಷೇತ್ರದಲ್ಲಿ ಮನೆಗಳನ್ನು ಸಕ್ರಮಗೊಳಿಸುವುದು

168 - ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನರಸಿಂಹರಾಜ ಕ್ಷೇತ್ರದ ರಾಘವೇಂದ್ರ ಬಡಾವಣೆಯ ನಾಲ್ಕು ಕ್ರಾಸ್‌ಗಳಲ್ಲಿ ಸುಮಾರು 90 ಮನೆಗಳನ್ನು ಸಕ್ರಮ ಕಾರ್ಯ ಮಾಡದೆ ಎಲ್ಲಾ ಬಡಾವಣೆಗಳಲ್ಲಿ ಸಕ್ರಮಕಾರ್ಯ ನಡೆಯುತ್ತಿದ್ದರೂ ಯಾವುದೋ ರಾಜಕಾರಣಿಯ ಪ್ರಭಾವದಿಂದ ಈ ತೊಂಭತ್ತು ಮನೆಯವರಿಗೆ ಮಾತ್ರ ಸಕ್ರಮದ ಅರ್ಜಿಗಳನ್ನು ನೀಡದೆ ಸಕ್ರಮಗೊಳಿಸದಿರಲು ಕಾರಣವೇನು?*

ಆ) *ಈ ಮನೆಗಳನ್ನು ಸಕ್ರಮಗೊಳಿಸುವಲ್ಲಿ ಸರ್ಕಾರ ತೆಗೆದುಕೊಂಡ ಕ್ರಮವೇನು?*

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :

ಅ) ನ್ಯಾಯಾಲಯ ದಿನಾಂಕ 28-8-96ರಂದು ಯಥಾಸ್ಥಿತಿ ಕಾಪಾಡಿಕೊಂಡು ಬರಲು ಆದೇಶಿಸಿದ್ದರಿಂದ ಸದರಿ ಬಡಾವಣೆಗಳ ನಿವೇಶನಗಳನ್ನು ಸಕ್ರಮಗೊಳಿಸಲಾಗಿಲ್ಲ.

ಆ) ದಿನಾಂಕ 3-12-97 ರಂದು ನ್ಯಾಯಾಲಯ ಅರ್ಜಿದಾರರ ಅರ್ಜಿಯನ್ನು ತಿರಸ್ಕರಿಸಿರು -ವುದರಿಂದ ಈಗ ಸಕ್ರಮಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಇ. ಮಾರುತಿರಾವ್ ಪವಾರ್ : ಸನ್ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ದಿನಾಂಕ 28-8-95 ರಂದು ಯಥಾಸ್ಥಿತಿ ಕಾಪಾಡಿಕೊಂಡು ಹೋಗಬೇಕೆಂದು ಕೋರ್ಟ್ ಆದೇಶ ಬಂದಿದೆ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಅದರ ಕೆಳಗಡೆ ದಿನಾಂಕ 3-12-97 ರಂದು ನ್ಯಾಯಾಲಯ ಅರ್ಜಿದಾರರ ಅರ್ಜಿಯನ್ನು ತಿರಸ್ಕರಿಸಿದ್ದು ಈಗ ಸಕ್ರಮಗೊಳಿಸುತ್ತೇವೆನ್ನುವ ಉತ್ತರವನ್ನು ಕೊಟ್ಟಿದ್ದಾರೆ. ನನಗಾದರೂ ಅನ್ನಿಸುವುದೇನೆಂದರೆ, ಈಗ ನಗರ ಪಾಲಿಕೆ ಏನಿದೆ, ದಿನಾಂಕ: 3-12-97 ರಂದು ಏನು ಅರ್ಜಿಯನ್ನು ವಜಾ ಮಾಡಿದ್ದಾರೆಂದು ಉತ್ತರವನ್ನು ಕೊಟ್ಟಿದ್ದಾರೆ ಆ ಅರ್ಜಿಯನ್ನು ನಗರಪಾಲಿಕೆಗೆ ತಲುಪಿಸಿರಲಿಲ್ಲ.